ನಾಗೇಶ ಹೆಗಡೆ

ಕಲೆ: ಬಿ.ಜಿ. ಗುಜ್ಜಾರಪ್ಪ

# ಕನಸಿಗೆ ಕಟ್ಟಿದ ರೆಕ್ಕೆಪುಕ್ಕ

## ಇದೊಂದು ವಿಭಿನ್ನ ಗರುಡಪುರಾಣ!

"ದೇವರನ್ನು ಮರೆಯಬೇಡ. ನಿತ್ಯವೂ ಬೆಳಿಗ್ಗೆ ನಿನ್ನನ್ನು ಎಬ್ಬಿಸಲು ಆತ ಎಂದೂ ಮರೆಯುವುದಿಲ್ಲ – ನೆನಪಿರಲಿ!'' ಎಂಬ ಮಾತನ್ನು ಕ್ರೈಸ್ತ ಪಾದ್ರಿಗಳು ಆಗಾಗ ಹೇಳುತ್ತಿರುತ್ತಾರೆ. ಅದನ್ನು ಕೇಳಿದಾಗೆಲ್ಲ ನನಗೆ ಅವರ ದೇವರ ಬಗ್ಗೆ ಮರುಕ ಹುಟ್ಟುವುದುಂಟು. ಪಾಪ, ಆತನಿಗೆ ಅಹೋರಾತ್ರಿ ಡ್ಯೂಟಿ. ನಮ್ಮ ದೇವರು ಹಾಗಲ್ಲ. ನಿಮ್ಮ–ನಮ್ಮಂತೆ ಹಾಯಾಗಿ ರಾತ್ರಿ ನಿದ್ದೆ ಹೋಗುತ್ತಾನೆ. ಅಜೀರ್ಣವೋ, ಭಕ್ತರ ರಗಳೆಯೊ ಅಥವಾ ಇನ್ನ್ಯಾವುದೋ ಕಾರಣಕ್ಕೆ ಆತನಿಗೆ ನಿದ್ದೆ ಬಾರದಿದ್ದರೆ ತಟ್ಟಿ ಮಲಗಿಸುವ ಅಥವಾ ತೂಗಿ ಜೋಗುಳ ಹಾಡುವ ವ್ಯವಸ್ಥೆಯೂ ನಮ್ಮಲ್ಲಿ ಕೆಲವೆಡೆ ಇದೆ. ಎಂಥ ಜೋಗುಳಕ್ಕೂ ನಿದ್ರಿಸದೆ ರಚ್ಚೆ ಹಿಡಿದ ಮಗುವನ್ನು ಜನ್ಮಕೊಟ್ಟ ತಾಯಿಯೇ ಕೆಲವೊಮ್ಮೆ ತುಸು ಜೋರಾಗಿ ತಟ್ಟಿ, ಕೆಂಗಣ್ಣು ಬೀರಿ ಮಲಗಿಸುತ್ತಾಳಲ್ಲ? ಆದರೆ, ದೇವರನ್ನು ಮಲಗಿಸುವ ವಿಷಯದಲ್ಲಿ ಅಂಥದ್ದು ಮಾತ್ರ ಎಲ್ಲೂ ನಡೆದಂತಿಲ್ಲ. ದೇವರು ದೊಡ್ಡವನು. ರಚ್ಚೆ ಹಿಡಿಯಲಿಕ್ಕಿಲ್ಲ.

ಮತ್ತೆ, ಹಾಯಾಗಿ ಮಲಗಿದವನನ್ನು ಬೆಳಿಗ್ಗೆ ಎಬ್ಬಿಸಬೇಕಲ್ಲ! ಅದೂ ಸಾಂಗೋಪಾಂಗ ನಡೆಯುತ್ತಿರುತ್ತದೆ. ಆ ಕ್ರೈಸ್ತ ಪಾದ್ರಿಯ ಮಾತಿಗೆ ತದ್ವಿರುದ್ಧವಾದ ಹೇಳಿಕೆಯೊಂದು ಇಲ್ಲಿ ಆಗ ಉದ್ಭವವಾಗುತ್ತದೆ: 'ದೇವರೇ ನನ್ನನ್ನು ಮರೆಯಬೇಡ. ನಿನ್ನನ್ನು ಎಬ್ಬಿಸಲು ನಾನು ಎಂದೂ ಮರೆಯುವುದಿಲ್ಲ' ಎಂದು ನಸುಕಿನ ಭಕ್ತರು (ಅದೇ ತಾನೇ ಎದ್ದ) ಭಗವಂತನನ್ನು ಅಂತರಂಗದಲ್ಲಿ ಪ್ರಾರ್ಥಿಸಬಹುದು. ಹಾಗೆ ಒಳಗೊಳಗೇ ಪ್ರಾರ್ಥಿಸಿದರೆ ನನಗೇನೂ ತೊಂದರೆ ಇಲ್ಲ. ಆದರೆ, ಆತನನ್ನು ಎಬ್ಬಿಸುವ ಆ ಬಹಿರಂಗ ಧಾವಂತದಲ್ಲಿ ನನ್ನಂಥವನೂ ಎದ್ದು ಕೂರಬೇಕಾಗುತ್ತದೆ. ಅದರ ಕತೆ ಇದು.

★★★

'ಢಣಢಣ ಗಂಟೆ ಬಾರಿಸಿತು' ಎಂಬ ಮಾತನ್ನು ಓದುತ್ತಿದ್ದಂತೆಯೇ ಎಲ್ಲರಿಗೂ ಶಾಲೆಯ ನೆನಪಾಗುವುದು ಸಹಜ. ಕೆಲವರಿಗೆ ರೇಲ್ವೆ ಸ್ಟೇಶನ್ ನೆನಪಾದೀತು. ನನಗೆ ಮಾತ್ರ ಬಾಲ್ಯದ ನನ್ನ